ವಿಷಯ : ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಗುರುತಿಸುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೮೭ (೧೦೬೫)

ಶ್ರೀ ಬಿ. ಎಚ್. ಬನ್ನಿಕೋಡ (ಹಿರೇಕೆರೂರ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಅನೇಕ ಲಂಬಾಣಿ ತಾಂಡಾಗಳನ್ನು ಹಾಗೂ ಇತರೆ ಚಿಕ್ಕ ಗ್ರಾಮಗಳನ್ನು ಕಂದಾಯ ಗ್ರಾಮಗಳೆಂದು ಕಾನೂನು ಪ್ರಕಾರ ಗುರುತಿಸದೇ ಇರುವುದು, ಇದರಿಂದಾಗಿ ಸದರೀ ಗ್ರಾಮಗಳ ಒಡಜನರು ಸರ್ಕಾರದ ಸೌಲಭ್ಯಗಳನ್ನು ಪಡೆಯುವಲ್ಲಿ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸದರೀ ಲಂಬಾಣಿ ತಾಂಡಾಗಳನ್ನು ಹಾಗೂ ಚಿಕ್ಕ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಕಾನೂನು ಪ್ರಕಾರ ಗುರುತಿಸಿ ಸರ್ಕಾರದ ಸೌಲಭ್ಯಗಳನ್ನು ದೊರಕಿಸಿಕೊಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :–

ಅ) ಹೌದು

ಆ) ಗಣತಿ ಕಾರ್ಯ ಮುಗಿದ ನಂತರ ಈ ವಿಷಯವನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು

ವಿಷಯ :– ಬಗರ್ ಹುಕುಂ ಸಾಗುವಳಿ ಹುಲ್ಲುಗಾವಲು ಜಮೀನುಗಳನ್ನು ಮಾಡಿದವರಿಗೆ ಪಟ್ಟಾ ನೀಡುವದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೮೪ (೧೦೬೪)

ಶ್ರೀ ಬಿ. ಎಚ್. ಬನ್ನಿಕೋಡ್ (ಹಿರೇಕೆರೂರು) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ಜಾನುವಾರುಗಳಿಗೆ ಮೀಸಲಿಟ್ಟಿರುವ ಹುಲ್ಲುಗಾವಲು ಜಮೀನುಗಳನ್ನು ಬಗರ್ ಹುಕುಂ ಸಾಗುವಳಿ ಮಾಡಿದವರಿಗೆ ಪಟ್ಟಾ ಕೊಡಲು ಸರ್ಕಾರ ಯೋಚಿಸಿದೆಯೇ ?

೨. ಹಾಗಿದ್ದಲ್ಲಿ ಅರಣ್ಯ ಭೂಮಿ ಸಹ ಇಲ್ಲದ ಗ್ರಾಮಗಳ ಜಾನುವಾರುಗಳಿಗೆ ಹುಲ್ಲು ಗಾವಲು ಇಲ್ಲದೆಯೆ ವ್ಯವಸಾಯಕ್ಕೆ ಹಾಗೂ ಹೈನು ಅಭಿವೃದ್ಧಿಗೆ ತುಂಬಾ ತೊಂದರೆಯಾಗಿರುವದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೩. ಹುಲ್ಲುಗಾವಲುಗಳನ್ನು ಸಾಗುವಳಿ ಮಾಡದಂತೆ ಹಾಗೂ ಬಗರ್ ಹುಕುಂ ಸಾಗುವಳಿ ಮಾಡಿದ್ದರೆ ಅಂತವರನ್ನು ಹೊರಗೆ ಹಾಕಲು ಸರ್ಕಾರ ತೆಗೆದುಕೊಳ್ಳುವ ಕ್ರಮವೇನು ?